ತಾನೂ ಏನೋ ತಮಾಷೆಯಲ್ಲಿ ಉತ್ತರಿಸಿ ಅವನ ಗಂಡನ ಕೈಗೆ ಸಿಕ್ಕು ಏನಾದರೂ ಎಡವಟ್ಟಾದರೆ ಗತಿಯೇನು ಎಂಬ ಭಯ ಮತ್ತೊಂದು ಕಾರಣವಾಗಿತ್ತು. ಆದರೆ ಮನಸ್ಸಿನಲ್ಲಿ ಒಂದು ನವಿರಾದ ಭಾವವಂತೂ ಮೂಡಿಬಿಟ್ಟಿತ್ತು. ಎಂದೆಂದೂ ಹೆಣ್ಣಿನಿಂದ ಪ್ರೇಮ ಪತ್ರಗಳನ್ನು ಕಂಡಿರದ ಮೋಹನಸ್ವಾಮಿಗೆ, ಏನೋ ಹೊಸ ಸಂವೇದನೆಗಳು ಮೂಡಲಾರಂಭಿಸಿದ್ದವು. ಆದರೆ ಆ ಸಂವೇದನೆಯ ಮೂಲ ಪ್ರೇಮ ಅಥವಾ ಕಾಮವಂತೂ ಆಗಿರಲಿಲ್ಲ ಎನ್ನುವುದು ಅವನಿಗೆ ಸ್ಪಷ್ಟವಿತ್ತು.

ಅವನ ಭಿನ್ನ ಲೈಂಗಿಕತೆ ಅವಳಿಗೆ ಗೊತ್ತಾಗಲು ಹೆಚ್ಚಿನ ಸಮಯ ಬೇಕಾಗಲಿಲ್ಲ.

ನವೆಂಬರ್ ತಿಂಗಳಿನಲ್ಲಿ ನಡೆಯುವ "ಗೇ ಪ್ರೈಡ್"ಗಾಗಿ ಗೇ ಸಮುದಾಯದವರೆಲ್ಲಾ ಹಣವನ್ನು ಸಂಗ್ರಹಿಸುವ ಬೇರೆ ಬೇರೆ ಮಾರ್ಗವನ್ನು ಹುಡುಕಿದ್ದರು. ಅದರಲ್ಲಿ ಒಂದು ವಿನೂತನ ವಿಧಾನವಾದ "ಹಗ್ ಮಿ ಅಂಡ್ ಹೆಲ್ಪ್ ಮಿ" ಯಲ್ಲಿ ಅವನು ಸ್ವಯಂಸೇವಕನಾಗಿ ಭಾಗವಹಿಸಿದ್ದ. ಅವನೊಡನೆ ಹಲವಾರು ಗೇ ಗೆಳೆಯರು ಕೈ ಜೋಡಿಸಿದ್ದರು. ಆ ಕಾರ್ಯಾಚರಣೆಯ ವಿಧಾನ ವಿಶೇಷವಾಗಿತ್ತು.

ಶನಿವಾರ ಮತ್ತು ಭಾನುವಾರದ ಸಂಜೆಯಲ್ಲಿ "ನಾನೊಬ್ಬ 'ಗೇ'. ಹಗ್ ಮಿ ಅಂಡ್ ಹೆಲ್ಪ್ ಮಿ" ಎಂದು ಬರೆದ ಟೀ ಶರ್ಟನ್ನು ಧರಿಸಿ, ಕೈಯಲ್ಲಿ ಹುಂಡಿಯೊಂದನ್ನು ಇಟ್ಟುಕೊಂಡು, ಎಂ.ಜಿ. ರಸ್ತೆ ಮತ್ತು ಬ್ರಿಗೇಡ್ ರಸ್ತೆಗಳಲ್ಲಿ ಅವರೆಲ್ಲಾ ಓಡಾಡುತ್ತಿದ್ದರು. ವಿಶಾಲ ಮನಸ್ಸಿನ ಜನರು ಅದಕ್ಕೆ ಪ್ರತಿಕ್ರಿಯಿಸಿ, ಲಿಂಗ ಭೇದವಿಲ್ಲದಂತೆ ಅವರನ್ನು ತಬ್ಬಿಕೊಂಡು, ಡಬ್ಬಕ್ಕೆ ಒಂದಿಷ್ಟು ಹಣವನ್ನು ಹಾಕುತ್ತಿದ್ದರು. ಹೀಗೆ ಸಂಗ್ರಹಗೊಂಡ ಹಣವನ್ನು 'ಗೇ ಪ್ರೈಡ್' ಆಚರಿಸಲು ಬಳಸಿಕೊಳ್ಳುತ್ತಿದ್ದರು.

ಅವನ ಅದೃಷ್ಟವೋ, ದುರಾದೃಷ್ಟವೋ ಗೊತ್ತಿಲ್ಲ. ಸಾರಾ ಉನ್ನಿಕೃಷ್ಣನ್ ಅದೇ ದಿವಸ ತನ್ನ ಗಂಡ ಮತ್ತು ಮಗುವಿನ ಜೊತೆಯಲ್ಲಿ ಸಿಕ್ಕಾಪಟ್ಟೆ ಶಾಪಿಂಗ್ ಬ್ಯಾಗುಗಳನ್ನು ಹಿಡಿದುಕೊಂಡು ಅವನಿಗೆದುರಾಗಿ ಬಂದುಬಿಟ್ಟಳು. ಅವನನ್ನು ಗುರುತಿಸಿ, ಟೀ ಶರ್ಟಿನಲ್ಲಿ ಬರೆದಿದ್ದನ್ನು ಓದಿ ಹನಿಗಣ್ಣಾದಳು. ತನ್ನ ಶಾಪಿಂಗ್ ಬ್ಯಾಗುಗಳನ್ನು ಈಗಾಗಲೇ ಮಗುವನ್ನು ಸಂಬಾಳಿಸುತ್ತಿದ್ದ ಗಂಡನಿಗೆ ರವಾನಿಸಿ, ಮೋಹನಸ್ವಾಮಿಯನ್ನು ಅಪ್ಪಿಕೊಂಡು, ಹಣೆಗೊಂದು ಮುದ್ದಿಕ್ಕಿ, ಗಂಡನ ಪ್ಯಾಂಟಿನ ಜೇಬಿಗೆ ಕೈ ಹಾಕಿ ಪರ್ಸನ್ನು ತೆಗೆದು, ಐನೂರು ರೂಪಾಯಿಗಳ ನೋಟನ್ನು ಅವನ ಹುಂಡಿಗೆ ಹಾಕಿ ಬಿಟ್ಟಳು.

ಅನಂತರ ಆಕೆಯ ವರ್ತನೆಯೇ ಬೇರೆಯಾಗಿ ಹೋಯ್ತು. ಸಂದೇಶಗಳನ್ನು ಕಳುಹಿಸುವುದನ್ನು ನಿಲ್ಲಿಸಲಿಲ್ಲ. ಆದರೆ ಸಂದೇಶದ ಧಾಟಿ ಬದಲಾಯ್ತು. "ಗೇ ಎಂದು ನೀನು ಕಂಗೆಡಬೇಡ. ನಿನ್ನ ಜೊತೆಗೆ ನಾನಿದ್ದೇನೆ", "ಇಡೀ ಸಮಾಜವೇ ನಿನ್ನನ್ನು ವಿರೋಧಿಸಿದರೂ ನಿನ್ನ ನೈಜತೆಯನ್ನು ಬಿಟ್ಟು ಕೊಡಬೇಡ. ನಿನ್ನದೇನೂ ತಪ್ಪಿಲ್ಲ", "ಅಮೆರಿಕಾದ ಈ ಹುಡುಗ ಅದೆಷ್ಟು ಸೊಗಸಾಗಿ ಎಲ್ಲರಿಗೂ ತನ್ನ ಭಿನ್ನ ಲೈಂಗಿಕತೆಯನ್ನು ಹೇಳಿಕೊಂಡಿದ್ದಾನೆ ನೋಡು (ವಿಡಿಯೊ ಕೊಂಡಿಯೊಡನೆ ಬಂದ ಸಂದೇಶ)" – ಇತ್ಯಾದಿ ಅನುಕಂಪದ ಸಂದೇಶಗಳು ದಿನನಿತ್ಯ ಬರಲಾರಂಭಿಸಿದವು.

ಇದು ಮತ್ತೊಂದು ಬಗೆಯ ಕಿರಿಕಿರಿಯನ್ನು ಮೋಹನಸ್ವಾಮಿಗೆ ತಂದೊಡ್ಡಿದವು. ಈ ವೇಳೆಗಾಗಲೇ ಮೋಹನಸ್ವಾಮಿ ತನ್ನ ಲೈಂಗಿಕತೆಯನ್ನು ಒಪ್ಪಿಕೊಂಡು, ಸೊಗಸಾದ "ಗೇ" ಬದುಕನ್ನು ನಡೆಸುತ್ತಿದ್ದ. ಹಲವಾರು ಸಂಬಂಧಗಳನ್ನು ಅನುಭವಿಸಿದ್ದ ಮತ್ತು ನಾಲ್ಕೈದು "ಗೇ ಪ್ರೈಡ್"ಗಳಲ್ಲಿ ಭಾಗವಹಿಸಿದ್ದ. ಗೆಳೆಯರ ನಡುವೆ ಮುಜುಗರವಿಲ್ಲದಂತೆ ತನ್ನ ಲೈಂಗಿಕತೆಯನ್ನು